ಏರಿಯಾದಲ್ಲಿ ಯಾವ ಇಂಡಸ್ಟ್ರಿಗಳೂ ಬೆಳೆಯುವುದಿಲ್ಲ. ರೈತರಿಗೆ ಅನುಕೂಲ ಮಾಡುವಂಥದ್ದು ಆಗುತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕು. ದಯಮಾಡಿ ಈ ಬಿಲ್ಲನ್ನು ವಾಪಸ್ ತೆಗೆದುಕೊಂಡು, ಕೆಲವೊಂದು ಬ್ಯಾಕ್‌ವರ್ಡ್ ಏರಿಯಾಗಳಿಗೆ ಸ್ಟಾಂಪು ಎಗ್ಜೆಂಷನ್ ಮಾಡುತ್ತೇವೆ. ಇಂಥವುಗಳನ್ನು ಮೊದಲು ಮಾಡಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಸನ್ಮಾನ್ಯ ಮುದ್ದಹನುಮೇಗೌಡರವರು ಹೇಳಿದ ಉದೇಶ ಬಹಳ ಮುಖ್ಯವಾಗಿರುವಂಥದ್ದು. ಕೈಗಾರಿಕೆಗಳು ಬೇರೆ ರಾಜ್ಯಗಳಿಗೆ ಹೋಗದ ಹಾಗೆ ಅವರಿಗೆ ಪ್ರೋತ್ಸಾಹ ಕೊಡಲಿಕ್ಕೆ ಹಾಗೂ ಇಂಡಸ್ಟ್ರೀಗಳು ನಮ್ಮ ರಾಜ್ಯದಲ್ಲಿ ಹೆಚ್ಚಾಗಿ ಸ್ಥಾಪನೆಯಾಗುವುದಕ್ಕೆ ಈ ಒಂದು ಮಸೂದೆ ಬಹಳ ಅನುಕೂಲವಾಗುತ್ತದೆ. ಅದಕ್ಕೆ ತಾವೆಲ್ಲರೂ ಇದನ್ನು ದಯಮಾಡಿ ಒಪ್ಪಿ ಪಾಸ್ ಮಾಡಿಕೊಡಿ.

ಶ್ರೀ ಪಿ.ಜಿ. ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನಾನು ಆಪಾದನೆಗಳನ್ನು ಅನೇಕ ಸಂದರ್ಭದಲ್ಲಿ ಮಾಡಿದ್ದೇನೆ. ಇದು ಆ ಸರ್ಕಾರ ಈ ಸರ್ಕಾರ ಅವರ ಅಳ್ವಿಕೆ ಇವರ ಅಳ್ವಿಕೆ ಎನ್ನುವುದಕ್ಕಿಂತಲೂ ಹಿರಿಯ ಸಚಿವರುಗಳು ಇಲ್ಲಿ ಇದ್ದಾರೆ ಅವರಿಗೆಲ್ಲಾ ಗೊತ್ತಿದೆ. ಯಾರಾದರೂ ಒಬ್ಬ ದಾನಿಗಳು ತಮ್ಮ ಜಮೀನನ್ನು ಶಿಕ್ಷಣ ಸಂಸ್ಥೆಗಳಿಗೆ ದಾನವಾಗಿ ಕೊಟ್ಟರೆ, ಅದಕ್ಕೆ ಸ್ಟಾಂಪ್ ಡ್ಯೂಟಿ ಎಗ್ಜೆಂಷನ್‌ಗೆ ಒಂದು ಲಿಮಿಟ್ ಇರುತ್ತದೆ. ಆ ಲಿಮಿಟ್ ಒಳಗಡೆ ಕೊಡಲಿಕ್ಕೆ ಆಗದೇ ಹೋದರೆ ಅದು ಕ್ಯಾಬಿನೆಟ್‌ಗೆ ಬರಬೇಕಾಗುತ್ತದೆ. ನಾವು ಮುಂಚಿಯಿಂದಲೂ ಹೇಳುತ್ತಿದ್ದೇವೆ. ಈ ಸರ್ಕಾರ ಸದುದ್ದೇಶದಿಂದ ಇದನ್ನು ತಂದಿಲ್ಲ. ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಈ ಸರ್ಕಾರ ಇದನ್ನು ಬಹಳ ದುರುದ್ದೇಶದಿಂದ, ಕರ್ನಾಟಕ ರಾಜ್ಯ ಸರ್ಕಾರದ ಮುಂದಿನ ಆರು ವರ್ಷಗಳ ಭವಿಷ್ಯಕ್ಕೆ ಮಾರಕವಾಗತಕ್ಕಂಥ, ಸುಮಾರು 2000 ಕೋಟಿ ರೂಪಾಯಿಗಿಂತ ಹೆಚ್ಚಿನ ಹಣ ಬೊಕ್ಕಸಕ್ಕೆ ನಷ್ಟವಾಗತಕ್ಕಂಥ ಕಾನೂನನ್ನು, ಈ ಮಸೂದೆಯನ್ನು ನಾವು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ಸರ್ಕಾರ ಇದನ್ನು ವಾಪಸ್ ತೆಗೆದುಕೊಳ್ಳಲು ಒಪ್ಪುತ್ತಿಲ್ಲ. ನಾವು ಇದಕ್ಕೆ ಭಾಗಿಯಾಗಲು ತಯಾರಿಲ್ಲ. ನಾವು ಇದನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಜನತಾದಳ(ಯು) ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಮಂತ್ರಿಗಳು ಈಗಲಾದರೂ ಇದರ ಬಗ್ಗೆ ಗಮನಹರಿಸಬೇಕು. ತಕ್ಷಣವೇ ಇದನ್ನು ವಿತ್‌ಡ್ರಾ ಮಾಡಿಕೊಂಡು ಪುನಃ ರೀಕನ್ಸಿಡರ್ ಮಾಡಿ, ಏಕೆಂದರೆ, ಇದರಿಂದಾಗಿ ಭಯಂಕರ ಅನಾಹುತಗಳಾಗುತ್ತವೆ ದೊಡ್ಡ ದೊಡ್ಡ ಉದ್ದಿಮೆದಾರರಿಗೆ ಹಾಗೂ ದೊಡ್ಡ ದೊಡ್ಡ ಶ್ರೀಮಂತರಿಗೆ ಅನುಕೂಲ ನೀವು ಮಾಡಿಕೊಡುತ್ತಿದ್ದೀರಿ. ಈಗಲಾದರೂ ನೀವು ಇದನ್ನು ವಿತ್ ಡ್ರಾ ಮಾಡಿ ಕೊಳ್ಳಬೇಕು. ಬಹುಶಃ ಸರ್ಕಾರ ಇದಕ್ಕೆ ಸ್ಪಂಧಿಸುತ್ತಿಲ್ಲ. ಇದನ್ನು ನಾವು ಪ್ರತಿಭಟಿಸುತ್ತೇವೆ. ಈ ಸರ್ಕಾರದ ನೀತಿಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಆರ್.ವಿ. ದೇಶಪಾಂಡೆ(ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು):- ಮಾನ್ಯ ಅಧ್ಯಕ್ಷರೆ, ಇವರು ಏಕೆ ಸಭಾತ್ಯಾದ ಮಾಡುತ್ತಾರೋ ನನಗೆ ಗೊತ್ತಿಲ್ಲ. ಸರ್ಕಾರ ಒಂದು ಒಳ್ಳೆಯ ಮಸೂದೆ ತಂದಾಗ ಇದೇ ಪ್ರಕಾರ ನೀವು ಮಾಡಿ, ಆಗ ನಿಮಗೆ ಒಳ್ಳೆಯ ಪಬ್ಲಿಸಿಟಿ ಸಿಗಬಹುದು. ಮತ್ತೊಂದು ಸಿಗಬಹುದು ಎಂದು ತಿಳಿದು ಕೊಂಡರೆ ಅದು ಸಾಧ್ಯವಿಲ್ಲ. ಏಕೆಂದರೆ,